# ವಿವಿಡಿ ಶಾಲೆಯ ವಿದ್ಯಾರ್ಥಿಗಳಿಂದ ತಂತ್ರಜ್ಞಾನ ಕೇಂದ್ರಕ್ಕೆ ಭೇಟಿ



**ನುಡಿಜೇನು ವರದಿ**

**ಹಳಿಯಾಳ:** ವಿ.ಆರ್.ಡಿ.ಎಂ ಟ್ರಸ್ಟ್‌ನ ವಿಮಲ ವಿ ದೇಶಪಾಂಡೆ ಸ್ಕೂಲ ಆಫ್ ಎಕ್ಸಲೆನ್ಸ್ ಶಾಲೆಯ ವಿದ್ಯಾರ್ಥಿಗಳು ಶೈಕ್ಷಣಿಕ ಕಲಿಕೆಯ ಅಂಗವಾಗಿ, ಶುಕ್ರವಾರ ಕೆಎಲ್.ಎಸ್ ವಿಡಿಐಟಿ ಮಹಾವಿದ್ಯಾಲಯ ಹಳಿಯಾಳಕ್ಕೆ ಭೇಟಿ ನೀಡಿದರು.

10ನೇ ತರಗತಿಯ 40ಕ್ಕೂ ಅಧಿಕ ವಿದ್ಯಾರ್ಥಿಗಳು ಮಹಾವಿದ್ಯಾಲಯದ ತಾಂತ್ರಿಕ ವಸ್ತು ಸಂಗ್ರಹಾಲಯ ಜಾಗೃತಿ ಟೊಯೋಟಾ ಕಿರ್ಲೋಸ್ಕರ್‌ನ ಶ್ರೇಷ್ಠತಾ ಕೇಂದ್ರ, ಮಹಾವಿದ್ಯಾಲಯದ ಮೇಲ್ಛಾವಣಿಯ ಮೇಲೆ ಅಳವಡಿಸಿರುವ ಸೌರ ವಿದ್ಯುತ್ ಸ್ಥಾವರ, ಮಳೆ ಕೊಯ್ಲು ವ್ಯವಸ್ಥೆಯನ್ನು ವೀಕ್ಷಿಸಿ ಮಾಹಿತಿ ಪಡಿದುಕೊಂಡರು. ತಾಂತ್ರಿಕ ಕ್ಷೇತ್ರದಲ್ಲಾಗಿರುವ ನೂತನ ಬದಲಾವಣೆಗಳ ಕುರಿತಾಗಿ ವಿವಿಧ ವಿಭಾಗದ ಪ್ರಾಧ್ಯಾಪಕರಿಂದ ಮಾಹಿತಿ ಪಡೆದರು.

ಕೆ ಎಲ್.ಎಸ್ ವಿಡಿಐಟಿ ಮಹಾವಿದ್ಯಾಲಯ ಎಲ್ಲ ಉಪನ್ಯಾಸಕ ವೃಂದದವರು ಮಕ್ಕಳಲ್ಲಿರುವ ಹಲವಾರು ವೈಜ್ಞನಿಕ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿ ಮಕ್ಕಳಲ್ಲಿರುವ ವೈಜ್ಞಾನಿಕ ಆಲೋಚನೆಯನ್ನು ಪ್ರಶಂಸಿಸಿದರು.

ಶಾಲೆಯ ಪ್ರಾಂಶುಪಾಲರಾದ ಬಸವರಾಜು ಎಚ್. ಎಮ್‌ರವರು ತಮ್ಮ ಮಕ್ಕಳ ಭೇಟಿಗಾಗಿ ಅವಕಾಶ ಮಾಡಿಕೊಟ್ಟ ಹಾಗೂ ಉತ್ತಮ ಮಾಹಿತಿ ನೀಡಿದ ವಿಡಿಐಟಿ ಮಹಾವಿದ್ಯಾಲಯಕ್ಕೆ ಧನ್ಯವಾದ ತಿಳಿಸಿದರು.

ಈ ಭೇಟಿಯಲ್ಲಿ ಮಕ್ಕಳೊಂದಿಗೆ ಶಾಲೆಯ ವಿಜ್ಞಾನ ವಿಭಾಗದ ಶಿಕ್ಷಕರು ಪಾಲ್ಗೊಂಡಿದರು.

# ಕೆಎಲ್‌ಎಸ್ ವಿಡಿಐಟಿ ತಂತ್ರಜ್ಞಾನ ಕೇಂದ್ರಕ್ಕೆ ವಿವಿಡಿ ವಿದ್ಯಾರ್ಥಿಗಳ ಭೇಟಿ

**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯ ಹಳಿಯಾಳಕ್ಕೆ ವಿವಿಡಿ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ವಿದ್ಯಾರ್ಥಿಗಳು ಭೇಟಿ ನೀಡಿದ್ದರು. 10ನೇ ತರಗತಿಯ 40ಕ್ಕೂ ಅಧಿಕ ವಿದ್ಯಾರ್ಥಿಗಳು ಮಹಾವಿದ್ಯಾಲಯದ ತಾಂತ್ರಿಕ ವಸ್ತು ಸಂಗ್ರಹಾಲಯ ಜಾಗೃತಿ , ಟೊಯೋಟಾ ಕಿರ್ಲೋಸ್ಕರ್ ನ ಶ್ರೇಷ್ಠತಾ ಕೇಂದ್ರ, ಮಹಾವಿದ್ಯಾಲಯದ ಮೇಲ್ಚಾವಣಿಯ ಮೇಲೆ ಅಳವಡಿಸಿರುವ ಸೌರ ವಿದ್ಯುತ್ ಸ್ಥಾವರ , ಮಳೆ ಕೊಯ್ಲು ವ್ಯವಸ್ಥೆ ಯನ್ನು ವೀಕ್ಷಿಸಿ ಮಾಹಿತಿ ಪಡೆದುಕೊಂಡರು. ತಾಂತ್ರಿಕ ಕ್ಷೇತ್ರದಲ್ಲಾಗಿರುವ ನೂತನ ಬದಲಾವಣೆಗಳ ಕುರಿತಾಗಿ ವಿವಿಧ ವಿಭಾಗದ ಪ್ರಾಧ್ಯಾಪಕರುಗಳಿಂದ



ತಿಳಿದುಕೊಂಡರು. ವಿಡಿಐಟಿಯ ಈ ಭೇಟಿಯಿಂದ ತಮ್ಮ ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನದ ಮಾದರಿಗಳನ್ನು ವೀಕ್ಷಿಸಿ ಹಾಗೂ ಅದರ ಕಾರ್ಯವೈಖರಿಯನ್ನು ತಿಳಿದುಕೊಂಡಿರುವುದು ತಾಂತ್ರಿಕ ಜ್ಞಾನದ ಉನ್ನತೀಕರಣಕ್ಕೆ ಸಹಕಾರಿಯಾಗಲಿದೆ ಮತ್ತು ತಮ್ಮ ಶಾಲೆಯು ವಿಡಿಐಟಿ ಮಹಾವಿದ್ಯಾಲಯಕ್ಕೆ ಆಭಾರಿಯಾಗಿದೆ ಎಂದು ವಿವಿಡಿ ಶಾಲೆಯ ಪ್ರಾಂಶುಪಾಲ ಬಸವರಾಜ್ ಎಚ್.ಎಂ. ಹೇಳಿದ್ದಾರೆ. ವಿಆರ್‌ಡಿಎಂ ಟ್ರಸ್ಟ್ ನ ವ್ಯವಸ್ಥಾಪಕ ಪ್ರಕಾಶ್ ಪ್ರಭು ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಪ್ರೊ. ರಜತ್ ಆಚಾರ್ಯ ಸಂಯೋಜಿಸಿದ್ದರು. ಪ್ರೊ. ಕಿರಣ್ ಕುಮಾರ್ ಎಚ್., ಪ್ರೊ. ರಜತ್ ಆಚಾರ್ಯ, ಪ್ರೊ. ಗುರುನಾಥ ಮೇವುಂಡಿ, ಪ್ರೊ. ಸುಧೀಂದ್ರ ವೈ, ಪ್ರೊ. ಹರ್ಷವರ್ಧನ್, ಪ್ರೊ. ಪ್ರಾಣೇಶ್ ಕುಲಕರ್ಣಿ ವಿವಿಧತಂತ್ರಜ್ಞಾನದಕುರಿತು ವಿದ್ಯಾರ್ಥಿಗಳಿಗೆ ವಿವರಣೆ ನೀಡಿದರು. ಮಹಾವಿದ್ಯಾಲಯದಲ್ಲಿರುವ ತಂತ್ರಜ್ಞಾನದ ಮಾದರಿ ಹಾಗೂ ವಿವಿಧ ಕೇಂದ್ರಗಳನ್ನು ಗಳನ್ನು ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳು ಮುಕ್ತವಾಗಿ ವೀಕ್ಷಿಸಬಹುದಾಗಿದೆ ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.